ಒಂದು ವರ್ಷಕ್ಕೆ ಮಾತ್ರ ಕೊಟ್ಟಿದ್ದೀರಿ. ಎರಡನೇ ವರ್ಷಕ್ಕೆ ಅನುದಾನ ಬಿಡುಗಡೆಯಾಗಿದೆ, ಆದರೆ ರಸ್ತೆ ರಿಪೇರಿ ಪ್ರಾರಂಭವಾಗಿಲ್ಲ. ಇನ್ನೂ ಎರಡು ವರ್ಷದ ಹಣ ಬರಬೇಕಾಗಿದೆ. ಇವತ್ತು ನಮಗೆ ಹಳ್ಳಿಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ, ಅಷ್ಟು ರಸ್ತೆಗಳು ಹಾಳಾಗಿವೆ. ಜಿಲ್ಲಾ ಪಂಚಾಯತ್‌ನವರು ಆ ರಸ್ತೆಯನ್ನು ರಿಪೇರಿ ಮಾಡಿಸುತ್ತಿಲ್ಲ. ನೀವು ರಸ್ತೆ ದುರಸ್ಥಿಗೆ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ರಸ್ತೆ ರಿಪೇರಿಗೆಂದು ಕೊಡುವಂತಹ ಹಣವನ್ನೂ ಸಹ ಕೊಡುತ್ತಿಲ್ಲ. ನೀವು ಪ್ರತಿ ವರ್ಷ ರಸ್ತೆ ರಿಪೇರಿಗೆಂದು 15 ಲಕ್ಷ ರೂಗಳನ್ನು ಕೊಡುತ್ತೀರೆಂದು ಹೇಳಿದ್ದಿರಿ. ಆ ಹಣವನ್ನೂ ಸಹ ಕೊಡುತ್ತಿಲ್ಲ. ಅದರಿಂದಾಗಿ ನಮ್ಮ ಕ್ಷೇತ್ರದ ಎಪಿಎಂಸಿ ರಸ್ತೆಗಳು ಎಲ್ಲಾ ಹಾಳಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಹೇಳಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ವಿಚಾರ ಸರಿ ಇದೆ. ಈಗಾಗಲೇ ಸರ್ಕಾರದಿಂದ ಸುತ್ತೋಲೆಯನ್ನು ಹೊರಡಿಸಿದ್ದೇವೆ. ಈ ಸುತ್ತೋಲೆಯ ಪ್ರಕಾರ ಆ ರಸ್ತೆಗಳನ್ನು ಸಂಬಂಧಪಟ್ಟ ಇಲಾಖೆಯವರು ರಿಪೇರಿ ಮಾಡಿಸುವ ವ್ಯವಸ್ಥೆಯನ್ನು ಶೀಘ್ರದಲ್ಲೇ ಮಾಡಿಸುತ್ತೇನೆ.

ಕೊಡಗಿನಲ್ಲಿ ತೋಟಗಾರಿಕಾ ಫಾರಂಗಳು

354 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ ಎಷ್ಟು ತೋಟಗಾರಿಕೆ ಇಲಾಖೆಗಳು (ಫಾರಂ) ಕೊಡಗು ಜಿಲ್ಲೆಯಲ್ಲಿ ಇವೆ? ಅವು ಯಾವುವು?

ಆ) ಈ ತೋಟಗಾರಿಕೆಯ ಅಡಿಯಲ್ಲಿ ಎಷ್ಟು ಎಕರೆ ಜಮೀನು ಇದೆ?

ಇ) ಈ ತೋಟಗಾರಿಕೆ ಇಲಾಖೆಗೆ (ಫಾರಂ) ವರ್ಷ ಪ್ರತಿ ಎಷ್ಟು ಹಣ ಬಿಡುಗಡೆ ಮಾಡಲಾಗುತ್ತಿದೆ? (ಕಳೆದ ಮೂರು ವರ್ಷದ ವಿವರ ನೀಡುವುದು)

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಕೊಡಗು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ರಾಜ್ಯ ವಲಯಕ್ಕೆ ಸೇರಿದ 5 ಕ್ಷೇತ್ರ ಸಸ್ಯಾಗಾರಗಳು ಮತ್ತು ಜಿಲ್ಲಾ ವಲಯಕ್ಕೆ ಸೇರಿದ 4 ಕ್ಷೇತ್ರ : ಸಸ್ಯಾಗಾರಗಳು ಇರುತ್ತವೆ. ಅನುಬಂಧ - 1ರಲ್ಲಿ ವಿವರ ನೀಡಿದೆ.

ಆ) 540 ಎಕರೆ.

ಇ) ಈ ತೋಟಗಾರಿಕೆ ಕ್ಷೇತ್ರಗಳ ಅಭಿವೃದ್ಧಿಗಾಗಿ : ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳಿಂದ ಬಿಡುಗಡೆ ಮಾಡಿದ ಹಣದ ವಿವರ ಈ ಕೆಳಕಂಡತಿರುತ್ತದೆ.

ವರ್ಷ	ಬಿಡುಗಡೆ ಮಾಡಿದ ಹಣ (ಲಕ್ಷ ರೂಗಳಲ್ಲಿ)
1995-96	8.95
1996-97	9.78
1997-98	12.25

ಅನುಬಂಧ - 1

ಕೊಡಗು ಜಿಲ್ಲೆಗೆ ಸೇರಿದ ರಾಜ್ಯ ವಲಯ ಹಾಗೂ ಜಿಲ್ಲಾ ವಲಯದ ಅಧೀನದಲ್ಲಿರುವ ತೋಟಗಾರಿಕೆ ಕ್ಷೇತ್ರ : ಸಸ್ಯಾಗಾರಗಳ ವಿವರಗಳು

ಕ್ರಮ ಸಂಖ್ಯೆ	ಕ್ಷೇತ್ರದ ಹೆಸರು	ತಾಲ್ಲೂಕು	ವಿಸ್ತೀರ್ಣ
ಅ)	**ರಾಜ್ಯ ವಲಯ**		
1.	ಮಡಿಕೇರಿ ತೋಟಗಾರಿಕೆ ಕ್ಷೇತ್ರ	ಮಡಿಕೇರಿ	9.20 ಎಕರೆ
2.	ಮಾದಾಪುರ ತೋಟಗಾರಿಕೆ ಕ್ಷೇತ್ರ	ಸೋಮವಾರಪೇಟೆ	234.00 ಎಕರೆ
3.	ಹಾರಂಗಿ ತೋಟಗಾರಿಕೆ ಕ್ಷೇತ್ರ	-"-	128.00 ಎಕರೆ
4.	ಮಾದಲಾಪುರ ತೋಟಗಾರಿಕೆ ಕ್ಷೇತ್ರ	-"-	100.00 ಎಕರೆ
5.	ಪೊನ್ನಂಪೇಟೆ ತೋಟಗಾರಿಕೆ ಕ್ಷೇತ್ರ	ವಿರಾಜಪೇಟೆ	8.20 ಎಕರೆ
ಆ)	**ಜಿಲ್ಲಾ ವಲಯ**		
1.	ಕೂಡಿಗೆ ತೋಟಗಾರಿಕೆ ಕ್ಷೇತ್ರ	ಸೋಮವಾರಪೇಟೆ	12.00 ಎಕರೆ
2.	ಬೆಳಗುಂದ ತೋಟಗಾರಿಕೆ ಕ್ಷೇತ್ರ	-"-	9.00 ಎಕರೆ
3.	ನಾಪೋಕ್ಲು ತೋಟಗಾರಿಕೆ ಕ್ಷೇತ್ರ	ಮಡಿಕೇರಿ ತಾಲ್ಲೂಕು	30.00 ಎಕರೆ
4.	ಅರವತ್ತೊಕ್ಕಲು ತೋಟಗಾರಿಕೆ ಕ್ಷೇತ್ರ	ವೀರಾಜಪೇಟೆ	9.00 ಎಕರೆ

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಸನ್ಮಾನ್ಯ ಅಧ್ಯಕ್ಷರೆ, ಯಾವ ಯಾವ ಫಾರಂಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆಂದು ಕೇಳಿದ್ದೇನೆ. ಆದರೆ ಅವರು ಒಟ್ಟಿಗೆ ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯಕ್ಕೆ ಹಾಗೂ ಜಿಲ್ಲೆಗೆ ಸಂಬಂಧಪಟ್ಟ ಹಾಗೆ 540 ಎಕರೆ ತೋಟಗಾರಿಕೆ ಇದೆ ಎನ್ನುವಂತಹ

ಮಾತನ್ನು ಹೇಳಿದ್ದಾರೆ. ಈ 540 ಎಕರೆ ಈ ವರ್ಷ ಸುಮಾರು 12.25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಮ್ಮ ಮಾದಾಪುರ ತೋಟಗಾರಿಕೆಯಲ್ಲಿ ಎಷ್ಟು ಎಕರೆ ತೋಟಗಾರಿಕೆ ರೂಪಿತವಾಗಿದೆ? ಎಷ್ಟು ಎಕರೆ ಕಾಡಾಗಿ ಉಳಿದಿದೆ? ಮಾದಾಪುರಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಾ ಎಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ತೋಟಗಾರಿಕೆ ಇಲಾಖೆಯ ಫಾರಂಗಳಿಗೆ ಪ್ರತಿ ವರ್ಷ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗುತ್ತದೆಂದು ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಒದಗಿಸಿದ್ದೇವೆ. ಅವರು ಫಾರಂವೈಸ್ ಮಾಹಿತಿ ಕೇಳಿದರೆ ಅದಕ್ಕೆ ಡಿಟೈಲ್ ಆಗಿ ಹೇಳಬೇಕಾಗುತ್ತದೆ. ಅದನ್ನು ತರಿಸಿ ನಿಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ನಾನು ಈ ಪ್ರಶ್ನೆಯನ್ನು ಏತಕ್ಕೆ ಕೇಳಿದೆನೆಂದರೆ, ಮಾದಾಪುರದಲ್ಲಿ ಈಗಾಗಲೇ ಇರುವಂತಹ ತೋಟಗಾರಿಕೆಯಲ್ಲಿ ಕೇವಲ 60 ಎಕರೆಯಲ್ಲಿ ಸಪೋಟ ಮಾಡಿದ್ದಾರೆ. ಅಲ್ಲಿ ಸಪೋಟವನ್ನು ಆಕ್ಷನ್ ಮಾಡಿದಾಗ ಆಕ್ಷನ್ ತೆಗೆದುಕೊಂಡಿರುವವರು ಗೊಬ್ಬರ ಹಾಕುವಂತಹ ಪರಿಸ್ಥಿತಿ ಬಂದಿದೆ. ಅವರು ನಮಗೆ ಹೆಚ್ಚು ಫಲವತ್ತತೆ ಬರಲಿ ಎಂದು ಗೊಬ್ಬರವನ್ನು ಹಾಕುತ್ತಾರೆ. ತೋಟಗಾರಿಕೆ ಇಲಾಖೆಯಿಂದ ಗೊಬ್ಬರವನ್ನು ಹಾಕುತ್ತಿಲ್ಲ. ಅದಕ್ಕೋಸ್ಕರ ಇದರ ಬಗ್ಗೆ ವಿವರವನ್ನು ಸರಿಯಾಗಿ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಡಿ.ಟಿ. ಜಯಕುಮಾರ್ : ಆಕ್ಷನ್ ಆದ ಮೇಲೆ ಅದರ ಜವಾಬ್ದಾರಿ ನಮ್ಮ ಮೇಲೆ ಬೀಳುತ್ತದೆ. ಅದರ ಮೆಂಟನೆನ್ಸ್ ನೀರು, ಗೊಬ್ಬರ ಎಲ್ಲವನ್ನೂ ನೋಡಿಕೊಳ್ಳುವಂತೆ ಜವಾಬ್ದಾರಿ ನಮ್ಮ ಇಲಾಖೆಗೆ ಬೀಳುತ್ತದೆ. ನಾವು ಎಲ್ಲಾ ಕಡೆ ಒಂದೇ ತರಹ ಮಾಡುತ್ತಿದ್ದೇವೆ. ಮಾದಾಪುರ ಫಾರಂನಲ್ಲಿ ಏಕೆ ಮಾಡಲಿಲ್ಲ ಎಂಬ ಬಗ್ಗೆ ವಿಚಾರಿಸಿ, ಅಕಸ್ಮಾತ್ ಅವರು ಸರಿಯಾಗಿ ನೀರು, ಗೊಬ್ಬರ ಕೊಡದೇ ಇದ್ದರೆ ಸಾಕಾದಷ್ಟು ಹಣವನ್ನು ಒದಗಿಸಿ ಅದನ್ನು ಮಾಡಿಕೊಡುತ್ತೇವೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡಲಿಕ್ಕೆ ಬಯಸುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಹಾರಂಗಿ ಮತ್ತು ಮಡಿಕೇರಿ ಬಗ್ಗೆ ಡಿಟೈಲ್ಸ್ ಕೊಡಬೇಕೆಂದು ಕೇಳಿದ್ದೇನೆ.

ಶ್ರೀ ಡಿ.ಟಿ. ಜಯಕುಮಾರ್ : ಇದರ ಬಗ್ಗೆ ಡಿಟೈಲ್ ಆಗಿ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಬೈಲಹೊಂಗಲ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಕೆಲಸ ಮಾಡುವ ಹಮಾಲಿಗಳಿಗೆ ಮನೆಗಳು

359 - ಶ್ರೀ ಮಹಾಂತೇಶ್ ಎಸ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಕೆಲಸ ಮಾಡುತ್ತಿರುವ ಹಮಾಲರಿಗೆ ಮನೆಗಳನ್ನು ಕಟ್ಟಿಸಿಕೊಡುವ ಸಲುವಾಗಿ ಸರ್ಕಾರಕ್ಕೆ ಮನವಿ ಬಂದಿದೆಯೇ?